# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, 10 ಅಕ್ಟೋಬರ್ 2017, ಬೆಂಗಳೂರು, ಸಂಪುಟ 3, ಸಂಚಿಕೆ 6, ಪುಟಗಳು-4. ಸಂಪಾದಕರು : ಜಿ.ಟಿ.ಗೋವಿಂದಪ್ಪ
Kannada monthly, 10 October 2017, Bangaluru, Vol. 3, No.6, Pages-4, KARKAN2015/68727 Editor: G.T. Govindappa.

ಚಂದ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

| | |
|---|---|
| ಕೋ ನು ಹಾಸೋ ಕಿಮಾನಂದೋ, ನಿಚ್ಚನ್ ಪಜ್ಜಲಿತೇ ಸತಿ; ಅಂಧಕಾರೇನ ಓನದ್ಧಾ, ಪದೀಪಂ ನ ಗವೇಸಥ. | ಪ್ರಪಂಚವು ಸದಾ ಹತ್ತಿ ಉರಿಯುತ್ತಿರುವಾಗ ಈ ನಗು ಏತಕ್ಕೆ? ಈ ಆನಂದ ಏತರದು? ಕತ್ತಲೆಯಲ್ಲಿ ಕಳೆದು ಹೋಗಿರುವ ನೀನು, ಬೆಳಕನ್ನು ಹುಡುಕುವುದಿಲ್ಲವೆ? |

**ಧಮ್ಮ ಪದ – 146, ಜರಾವಗ್ಗೋ**

## ದೀಪಾವಳಿಯ ಅರ್ಥಪೂರ್ಣತೆ

**ಪ್ರಧಾನ ಆಚಾರ್ಯ ಎಸ್.ಎನ್. ಗೋಯಂಕ (1924–2013)**

ಮುಂಬಯಿಯ ಜಮ್ನಾಬಾಯಿ ಸ್ಕೂಲಿನಲ್ಲಿ ನವೆಂಬರ್ 5, 2002 ರಂದು ದೀಪಾವಳಿ ಹಬ್ಬದ(ಹಿಂದೂಗಳ ಬೆಳಕಿನ ಹಬ್ಬ) ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳಿಗೆ ನೀಡಿದ ಒಂದು ಪ್ರವಚನ. ನವೆಂಬರ್, 2016ರ ಇಂಗ್ಲೀಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.

ಪ್ರೀತಿಯ ವಿದ್ಯಾರ್ಥಿಗಳೇ !

ಧಮ್ಮವು ಉದಯವಾದಾಗ, ಕತ್ತಲೆಯು ದೂರವಾಗುತ್ತದೆ ಮತ್ತು ಬೆಳಕು ಎಲ್ಲಾ ಕಡೆ ಹರಡುತ್ತದೆ. ಆದರೂ, ಧಮ್ಮವೆಂದರೇನು, ಕತ್ತಲೆ ಎಂದರೇನು, ನಿಜವಾಗಿಯೂ ಬೆಳಕು ಯಾವುದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಚಂದ್ರನಿಲ್ಲದ ದೀಪಾವಳಿಯ ರಾತ್ರಿ, ಕತ್ತಲೆಯನ್ನು ಓಡಿಸುವ ಸಂಕೇತವಾಗಿ, ಸಾಲು ಸಾಲು ಎಣ್ಣೆಯ ದೀಪಗಳನ್ನು ಹಚ್ಚುವುದೊಂದೇ ನಮಗೆ ಉಳಿಯುವುದು.

ಎಣ್ಣೆ ದೀಪಗಳನ್ನು ಹಚ್ಚುವುದು ಖಂಡಿತವಾಗಿಯೂ ಒಂದು ಸಮಂಜಸವಾದ ಸಂಕೇತ. ಆದರೆ ನಿಜವಾಗಿ ಧಮ್ಮ ಏನನ್ನು ಅರ್ಥೈಸುತ್ತದೆ ಎಂಬುದನ್ನು ತಿಳಿದುಕೊಳ್ಳೋಣ. ನಿಜವಾದ ಧಮ್ಮ ಎಲ್ಲವನ್ನೂ ಒಳಗೊಳ್ಳುತ್ತದೆ, ಎಲ್ಲರಿಗೂ ಅನ್ವಯಿಸುತ್ತದೆ, ಎಲ್ಲವನ್ನೂ ವ್ಯಾಪಿಸಿಕೊಳ್ಳುತ್ತದೆ ಮತ್ತು ಎಲ್ಲಾ ಸಮಯದಲ್ಲೂ ಇರುತ್ತದೆ. ಯಾವಾಗ ಧಮ್ಮ ಒಂದು ಗೊತ್ತಾದ ಸಮುದಾಯದ ಜನರಿಗೆ ಸೀಮಿತವಾಗುತ್ತದೆಯೋ ಅದು ಸಾರ್ವತ್ರಿಕ ಧಮ್ಮವಾಗುವುದಿಲ್ಲ, ಅದು ನಿಜವಾದ ಧಮ್ಮವಾಗಿ ಉಳಿಯುವುದಿಲ್ಲ. ಅದೇ ತರಹ, ಧಮ್ಮವು ಒಂದು ಗೊತ್ತಾದ ಪ್ರದೇಶಕ್ಕೆ ಸೀಮಿತವಾದರೆ, ಆಗಲೂ ಅದು ನಿಜವಾದ ಧಮ್ಮವಲ್ಲ. ಜೊತೆಗೆ, ಎಲ್ಲಾ ಕಾಲಕ್ಕೂ ಧಮ್ಮವು ಯಥಾರ್ಥವಾಗಿ ಉಳಿಯದಿದ್ದರೆ, ಕಾಲಕಾಲಕ್ಕೆ ಅದು ಬದಲಾಗುತ್ತಿದ್ದರೆ, ಆಗಲೂ ಅದು ನಿಜವಾದ ಧಮ್ಮವಾಗಿ ಉಳಿಯುವುದಿಲ್ಲ.

ಧಮ್ಮವು ಪ್ರಕೃತಿಯ ನಿಯಮವಾಗಿದೆ. ಅದು ಎಲ್ಲಾ ಸಮಯದಲ್ಲೂ, ಎಲ್ಲಾ ಸ್ಥಳಗಳಲ್ಲೂ ಮತ್ತು ಎಲ್ಲರಿಗೂ ಅನ್ವಯವಾಗುವ ಸಾರ್ವತ್ರಿಕ ನಿಯಮ. ಸೂರ್ಯ ಹುಟ್ಟಿದಾಗ ಬೆಳಕು ಹರಡುತ್ತದೆ ಮತ್ತು ಉಷ್ಣಾಂಶ ಉತ್ಪತ್ತಿಯಾಗುತ್ತದೆ. ಇದು ಪ್ರಕೃತಿಯ ನಿಯಮಗಳಲ್ಲಿ ಒಂದು ನಿಯಮ. ಇದು ಸೂರ್ಯನ ಧಮ್ಮ ಮತ್ತು ಇದು ಯಾವಾಗಲೂ ಬದಲಾಗುವುದಿಲ್ಲ. ಬೆಂಕಿಯ ಧರ್ಮವು ಸುಡುವುದು. ಅದರ ದಾರಿಯಲ್ಲಿ ಯಾವುದು ಬರುತ್ತದೆಯೋ ಅದೂ ಸಹ ಸುಡುತ್ತದೆ. ಇದು ಅದರ ಸ್ವಭಾವ, ಅದರ ಧರ್ಮ. ಅದು ಆ ರೀತಿ ಅಲ್ಲದಿದ್ದರೆ, ಅದು ಬೆಂಕಿಯಲ್ಲ. ಮಂಜುಗಡ್ಡೆಯ ಸ್ವಭಾವವು, ಧರ್ಮವು ತಣ್ಣಗಿರುವುದು ಮತ್ತು ಯಾವುದು ಅದರ ಸಂಪರ್ಕಕ್ಕೆ ಬರುತ್ತದೆಯೋ ಅದನ್ನು ತಣ್ಣಗಾಗಿಸುವುದು. ಲಕ್ಷಾಂತರ ವರ್ಷಗಳ ಹಿಂದೆಯೂ ಇದು ನಿಜವಾಗಿತ್ತು, ಈಗಲೂ ನಿಜವಾಗಿದೆ ಮತ್ತು ಮುಂದೆಯೂ ನಿಜವಾಗಿರುತ್ತದೆ. ಇದು ಅದರ ಧರ್ಮ.

### ಮನಸ್ಸಿನ ಧಮ್ಮ

ಅದೇ ತರಹ, ಯಾವುದೇ ಮಲಿನತೆ ನಮ್ಮ ಮನಸ್ಸಿನಲ್ಲಿ ಬಂದ ಕೂಡಲೇ ನಾವು ನಮ್ಮ ಮನಸ್ಸಿನ ಸಮತೋಲನವನ್ನು, ನಮ್ಮ ಸಮತೆಯನ್ನು, ಜೊತೆಗೆ ನಮ್ಮ ಶಾಂತಿ ಮತ್ತು ಸಂತೋಷವನ್ನೂ ಕಳೆದುಕೊಳ್ಳುತ್ತೇವೆ. ಇದು ಮನಸ್ಸಿನ ಮಲಿನತೆಯ ಸ್ವಭಾವ, ಅದರ ಧರ್ಮ, ಎಲ್ಲರಿಗೂ ಅನ್ವಯಿಸುತ್ತದೆ. ಯಾವಾಗ ಮನಸ್ಸು ಮಲಿನತೆಗಳಿಂದ ಮುಕ್ತವಾಗುತ್ತದೆಯೋ ಮತ್ತು ಪರಿಶುದ್ಧವಾಗುತ್ತದೆಯೋ ಆಗ, ತಾನೇ ತಾನಾಗಿ ಪ್ರೀತಿ ತುಂಬಿದ ಕರುಣೆ, ಅನುಕಂಪ, ಸಹಾನುಭೂತಿ ಹುಟ್ಟುತ್ತವೆ. ಅದರ ಫಲವಾಗಿ ವ್ಯಕ್ತಿಯು ತನ್ನೊಳಗೆ ನಿಶ್ಚಲತೆ, ಶಾಂತಿ ಮತ್ತು ಬಹಳ ಸಂತೋಷವನ್ನು ಅನುಭವಿಸುತ್ತಾನೆ. ಇವುಗಳು ಆರೋಗ್ಯಕರ ಮನಸ್ಸಿನ ಗುಣಗಳು.

ಅನಾರೋಗ್ಯಕರವಾದ ಮನಸ್ಸು ನಮ್ಮನ್ನು ಅಸಂತೋಷ ಮತ್ತು ತಳಮಳಕ್ಕೀಡುಮಾಡುತ್ತದೆ. ಆರೋಗ್ಯಕರವಾದ ಮನಸ್ಸು ನಮ್ಮನ್ನು ಸಂತೋಷವಾಗಿ ಮತ್ತು ಶಾಂತಿಯಿಂದಿಡುತ್ತದೆ. ಲಕ್ಷಾಂತರ ವರ್ಷಗಳ ಹಿಂದೆಯೂ ಇದು ಸತ್ಯವಾಗಿತ್ತು, ಇವತ್ತೂ ಇದು ಸತ್ಯವಾಗಿದೆ ಮತ್ತು ಮುಂದೆಯೂ ಇದೇ ಸತ್ಯವಾಗಿರುತ್ತದೆ. ಒಬ್ಬ ವ್ಯಕ್ತಿಯು ತನ್ನನ್ನು ಯಾವುದೇ ಹೆಸರಿನಿಂದ ಕರೆದುಕೊಳ್ಳಲಿ, ಅವನು ಎಲ್ಲೇ ಹುಟ್ಟಿರಲಿ, ಯಾವುದೇ ರೀತಿಯ ಬಟ್ಟೆ ಹಾಕಿಕೊಳ್ಳಲಿ, ಅದು ಮುಖ್ಯವಾಗುವುದಿಲ್ಲ. ಅವನು ಈ ಧಾರ್ಮಿಕ ವಿಧಿ ಅಥವಾ ಆ ನಿತ್ಯಾಚರಣೆಯನ್ನು ಅನುಸರಿಸಲಿ, ಅವನು ಯಾವುದೇ ತತ್ವಶಾಸ್ತ್ರದಲ್ಲಿ ನಂಬಿಕೆಯಿಟ್ಟಿರಲಿ, ಅದು ಪ್ರಸ್ತುತವಲ್ಲ. ತನ್ನೊಳಗೆ ಅವನು ಮಲಿನತೆಯನ್ನು ಉತ್ಪತ್ತಿ ಮಾಡಿಕೊಂಡರೆ, ಕೂಡಲೇ ಶಿಕ್ಷೆಯು ಅನುಸರಿಸುತ್ತದೆ. ಜನಪ್ರಿಯ ನಂಬಿಕೆಯಂತೆ, ಶಿಕ್ಷೆಯು ಸತ್ತಮೇಲೆ ಬರುತ್ತದೆ ಎಂದು ವ್ಯಕ್ತಿಯು ಯೋಚಿಸಬಹುದು. ಅದೂ ಸಹ ಆಗುತ್ತದೆ. ಆದರೆ ಪ್ರಸ್ತುತದ ಬಗ್ಗೆ ಏನು? ವ್ಯಕ್ತಿಯು ತಳಮಳಕ್ಕೀಡಾದ ತಕ್ಷಣ ಶಿಕ್ಷೆಯು ಬರುತ್ತದೆ. ಇದು ವಾಸ್ತವ. ಇದು ಪ್ರಕೃತಿಯ ನಿಯಮ.

ಬೆಂಕಿಯ ಧರ್ಮ ಸುಡುವುದಾಗಿರುವುದರಿಂದ ಅದು, ವ್ಯಕ್ತಿಯು ಧರಿಸಿರುವ ಬಟ್ಟೆಯನ್ನಾಗಲಿ, ಅವನು ಹುಟ್ಟಿರುವ ಜಾತಿ ಅಥವಾ ಅವನ ಅಂತಸ್ತು ಅಥವಾ ಅವನ ನಂಬಿಕೆಗಳನ್ನು ಆಧರಿಸಿ ವ್ಯತ್ಯಾಸ ಮಾಡುವುದಿಲ್ಲ. ವ್ಯಕ್ತಿಯು ತನ್ನ ಕೈಯನ್ನು ಬೆಂಕಿಯಲ್ಲಿಟ್ಟರೆ, ಅವನು ಯಾರೇ ಆಗಿದ್ದರೂ ಅದು ಸುಡುತ್ತದೆ. ಈ ಸತ್ಯವನ್ನು ತಿಳಿದು ನಾವು ಬೆಂಕಿಯಿಂದ ದೂರ ಸರಿಯುತ್ತೇವೆ. ಅದೇ ತರಹ ಮನಸ್ಸಿನ ಮಲಿನತೆಗಳ ಧರ್ಮವು ವ್ಯಕ್ತಿಯನ್ನು ತಳಮಳಕ್ಕೀಡುಮಾಡುವುದು. ನಾವು ತಳಮಳಕ್ಕೊಳಗಾಗುವುದು ನಮಗೆ ಇಷ್ಟವಿಲ್ಲದಿದ್ದರೆ, ಮಲಿನತೆಗಳು ಉತ್ಪತ್ತಿಯಾಗದಂತೆ ನೋಡಿಕೊಳ್ಳಬೇಕು. ವ್ಯಕ್ತಿಯು ಮಲಿನತೆಗಳನ್ನು ಉತ್ಪತ್ತಿ ಮಾಡಿಕೊಂಡರೆ, ತಳಮಳವು ಅನಿವಾರ್ಯವಾಗಿ ಬಂದೇ ಬರುತ್ತದೆ. ಆದ್ದರಿಂದ ನಿಜವಾದ ಧಮ್ಮವು ಸರ್ವ ವ್ಯಾಪಿಯಾದುದು ಮತ್ತು ಯಾವಾಗಲೂ ಇರುವಂಥಹುದು.

ಧಮ್ಮವು ಪ್ರಕೃತಿಯ ನಿಯಮ ಮತ್ತು ನಮ್ಮ ಮನಸ್ಸಿನ ಶುದ್ಧತೆ ಅಥವಾ ಅಶುದ್ಧತೆ ಪ್ರಕಾರ ನಾವು ಬಹುಮಾನ ಅಥವಾ ಶಿಕ್ಷೆಯನ್ನು ಪಡೆಯುತ್ತೇವೆ ಎಂದು ಮಾನವಕುಲ ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದ ದಿನವೇ ನಿಜವಾದ ಧಮ್ಮ ಉದಯವಾಗುವ ಸಮಯ. ಅನಾರೋಗ್ಯಕರವಾದ ದೈಹಿಕ ಅಥವಾ ವಾಚಿಕ ಕ್ರಿಯೆಯನ್ನು ಮಾಡುವುದಕ್ಕೆ ಮುಂಚೆ ವ್ಯಕ್ತಿಯು ತನ್ನ ಮನಸ್ಸನ್ನು ಕೊಳೆಮಾಡಿಕೊಳ್ಳುತ್ತಾನೆ. ಅನಾರೋಗ್ಯಕರವಾದ ಕ್ರಿಯೆಗಳನ್ನು ಮಾಡುವುದನ್ನು ನಾನು ಮುಂದುವರಿಸಬಹುದು, ಹೇಗಾದರೂ

ನಾನು ರಕ್ಷಿಸಲ್ಪಡುತ್ತೇನೆ ಮತ್ತು ಹುಟ್ಟು ಮತ್ತು ಸಾವಿನ ಚಕ್ರದಿಂದ ಯಾರಾದರೂ ನನ್ನನ್ನು ಮುಕ್ತಗೊಳಿಸುತ್ತಾರೆ, ಮೇಲೆತ್ತುತ್ತಾರೆ ಮತ್ತು ಹಾರೈಸುತ್ತಾರೆ ಎಂದು ಯೋಚಿಸುತ್ತಾ ಒಬ್ಬ ವ್ಯಕ್ತಿಯು ತನ್ನನ್ನು ತಾನು ಮರುಳು ಮಾಡಿಕೊಂಡರೆ, ದಯವಿಟ್ಟು ಅರ್ಥಮಾಡಿಕೊಳ್ಳಿ, ಅವನು ದೊಡ್ಡ ಭ್ರಮೆಯಿಂದ ನೋವನ್ನು ಅನುಭವಿಸುತ್ತಾನೆ. ಜನರು ಸತ್ಯವನ್ನು ಕಾಣಲು ಸುಲಭವಾಗಿ ಒಪ್ಪುವುದಿಲ್ಲ ಮತ್ತು ಈ ವಿದ್ಯಮಾನ ತನ್ನಷ್ಟಕ್ಕೆ ತಾನೇ ಪುನರಾವರ್ತನೆಯಾಗುತ್ತದೆ. ಧರ್ಮದ ಮಾತುಗಳು ಮತ್ತು ಪಂಥೀಯವಾದ ಎರಡೂ ಒಂದೇ ಎಂದು ತಿಳಿಯುವುದಾದರೆ, ನಿಜವಾದ ಧಮ್ಮ ಎಂದರೆ ಏನು ಎಂಬುದನ್ನು ನಾವು ಅರ್ಥಮಾಡಿಕೊಳ್ಳುವುದು ಹೇಗೆ?

ಯಾವುದೇ ಧಾರ್ಮಿಕ ಸಂಪ್ರದಾಯವನ್ನು ನೋಡಿದರೂ, ಅದರ ಆಳದಲ್ಲಿ ಧಮ್ಮದ ತಿರುಳನ್ನು ನಾವು ಕಾಣುತ್ತೇವೆ; ಎಲ್ಲಾ ಧಾರ್ಮಿಕ ಚಿಂತನಾ ಧಾರೆಗಳು ಹೇಳುವುದು ಒಂದೇ–ಒಳ್ಳೆಯದಾದ (ಆರೋಗ್ಯಕರವಾದ) ಬದುಕನ್ನು ಬದುಕು. ಧಾರ್ಮಿಕನಾಗಲು ಒಳ್ಳೆಯದಾದ ಬದುಕನ್ನು ನಡೆಸುವ ಅವಶ್ಯಕತೆಯಿಲ್ಲ ಎಂದು ಯಾರೂ ಹೇಳುವುದಿಲ್ಲ.

ಒಳ್ಳೆಯದಲ್ಲದ (ಅನಾರೋಗ್ಯಕರವಾದ) ಜೀವನ ಎಂದರೆ ಏನು? ಇತರರಿಗೆ ಹಾನಿ ಮಾಡುವ, ಅವರ ಶಾಂತಿ ಮತ್ತು ಸಾಮರಸ್ಯವನ್ನು ನಾಶಮಾಡುವ ಯಾವುದೇ ವಾಚಿಕ ಅಥವಾ ದೈಹಿಕ ಕ್ರಿಯೆಯಲ್ಲಿ ವ್ಯಕ್ತಿಯು ತೊಡಗಿದರೆ, ಅದು ಒಳ್ಳೆಯ ಜೀವನವಲ್ಲ. ಈ ಕ್ರಿಯೆಗಳು ಮೊದಲು ಅನಾರೋಗ್ಯಕರವಾದ ಆಲೋಚನೆಗಳಾಗಿ ಮನಸ್ಸಿನಲ್ಲಿ ಉತ್ಪತ್ತಿಯಾಗುತ್ತವೆ. ಇದಕ್ಕೆ ಬದಲಾಗಿ ವ್ಯಕ್ತಿಯು, ಅನಾರೋಗ್ಯಕರವಾದ ಕ್ರಿಯೆಗಳ ಉತ್ಪತ್ತಿಯನ್ನು ನಿಯಂತ್ರಿಸಿದರೆ, ಆಗ ಅವನು ಮನಸ್ಸನ್ನು ನಿಯಂತ್ರಿಸುವ ಪ್ರಯತ್ನ ಮಾಡಿದ್ದಾನೆ. ವಿವಿಧ ಸಂಪ್ರದಾಯಗಳ ಜನರು ಇಲ್ಲಿಗೆ ಬರುತ್ತಾರೆ. ಅವರ ಧರ್ಮಗ್ರಂಥಗಳ ಬಗ್ಗೆ ಚರ್ಚಿಸುವಾಗ ಅವರೆಲ್ಲರೂ ಹೇಳುವುದು ಒಂದೇ–ಮನಸ್ಸನ್ನು ಶಿಸ್ತಿಗೊಳಪಡಿಸಿ. ಹೇಗೆ ನೀವು ಅದನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸುತ್ತೀರಿ?

ಅವನು ಅಥವಾ ಅವಳು ತನ್ನ ಮನಸ್ಸನ್ನು ಶಿಸ್ತಿನಿಂದಿಟ್ಟಿದ್ದರೂ ಸಹ ಮನಸ್ಸಿನ ಆಳದಲ್ಲಿ ಅಗಾಧವಾಗಿ ಸಂಗ್ರಹವಾಗಿರುವ ಮಲಿನತೆಗಳನ್ನು ವ್ಯಕ್ತಿಯು ಕಾಣುತ್ತಾನೆ. ತನ್ನ ಅಂತರಾಳದಿಂದ ಮೇಲೆದ್ದು ಬರುವ ಈ ಮಲಿನತೆಗಳು ದ್ವಿಗುಣವಾಗುವುದನ್ನೂ ಕಾಣುತ್ತಾನೆ. ನಾವು ನಮ್ಮ ಮನಸ್ಸನ್ನು ಶಿಸ್ತಿಗೊಳಪಡಿಸುವುದು ಒಳ್ಳೆಯದೇ. ಅದು ಕೇವಲ ಮೇಲ್ಪದರದ ಮನಸ್ಸಾಗಿರಬಹುದು. ಆದರೆ ಮನಸ್ಸಿನ ಅಂತರಾಳದಲ್ಲಿ ಮಲಿನತೆಗಳನ್ನು ದ್ವಿಗುಣಗೊಳಿಸುವ ಈ ಅಭ್ಯಾಸವು ಒಂದು ದಿನ ಅಗ್ನಿಪರ್ವತದಂತೆ ಸ್ಫೋಟಗೊಳ್ಳಬಹುದು. ಆಗ ಮೇಲ್ಮಟ್ಟದ ಮನಸ್ಸಿನಲ್ಲಿ ಸತತವಾಗಿ ಕೂಡಿಟ್ಟುಕೊಂಡ ಶಾಂತಿಯು ಕರಗಿ ಹೋಗುತ್ತದೆ. ಆದ್ದರಿಂದ ಮನಸ್ಸನ್ನು ಮೇಲ್ಮಟ್ಟದಲ್ಲಿ ಮತ್ತು ಆಳದಲ್ಲಿ ಸಂಪೂರ್ಣವಾಗಿ ಶುದ್ಧಿಮಾಡಬೇಕು. ಇದನ್ನು ಯಾರು ವಿರೋಧಿಸಲು ಸಾಧ್ಯ? ಯಾವ ಸಂಪ್ರದಾಯ ಇದನ್ನು ಆಕ್ಷೇಪಿಸುತ್ತದೆ? ಇದೇ ಧಮ್ಮ. ಇದು ಸಾರ್ವತ್ರಿಕವಾದುದು.

ಹೊರಗಿನ ವೇಷ–ಭೂಷಣಗಳು ಭಿನ್ನವಾಗಿದ್ದರೂ ಸಹ ಧಮ್ಮದ ಸಾರ ಎಲ್ಲರಿಗೂ ಒಂದೇ. ಒಂದು ಸಂಪ್ರದಾಯ ಕೆಲವು ಧಾರ್ಮಿಕ ವಿಧಿಗಳು ಮತ್ತು ನಿತ್ಯಾಚರಣೆಗಳು, ಪದ್ಧತಿಗಳು, ಉಪವಾಸ ವ್ರತಗಳು, ಹಬ್ಬಗಳು ಮತ್ತು ತತ್ವಸಿದ್ಧಾಂತಗಳನ್ನು ಹೊಂದಿರಬಹುದು. ಇನ್ನೊಂದು ಸಂಪ್ರದಾಯವು ಬೇರೆ ರೀತಿಯ ಧಾರ್ಮಿಕ ವಿಧಿಗಳು, ಪದ್ಧತಿಗಳು, ಹಬ್ಬಗಳು ಮತ್ತು ತತ್ವಸಿದ್ಧಾಂತಗಳನ್ನು ಹೊಂದಿರಬಹುದು. ಈ ವ್ಯತ್ಯಾಸಗಳು ವೈವಿಧ್ಯಮಯವಾದ ಪಂಥಗಳು ಮತ್ತು ಸಮುದಾಯಗಳ ಹುಟ್ಟಿಗೆ ಕಾರಣವಾಗುತ್ತವೆ. ಆದಾಗ್ಯೂ, ಪ್ರತಿಯೊಬ್ಬರಿಗೂ ಸರ್ವಸಮಾನವಾದುದು ನಿಜವಾದ ಧಮ್ಮ. ಅದು ಎಲ್ಲರಿಗೂ ಸೇರಿದ್ದು. ಅದು ಸಾರ್ವತ್ರಿಕ, ಎಲ್ಲರಿಗೂ ಎಲ್ಲಾ ಸಮಯದಲ್ಲೂ ಅನ್ವಯವಾಗುತ್ತದೆ; ಆಗ ಮಾತ್ರ ಅದು ಧಮ್ಮವಾಗುತ್ತದೆ. ಆದರೆ, ಹೊರಗಿನ ಪಂಥೀಯ ಹೊದಿಕೆಯನ್ನೇ ಸಾರಸತ್ವ ಎಂದು ನಂಬಲು ಪ್ರಾರಂಭಿಸುವುದು ಮತ್ತು ನಂತರ ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವುದು, ಅದರ ಜೊತೆಗೆ ನನ್ನ ಧಮ್ಮ ಮಾತ್ರ ಸತ್ಯ ಮತ್ತು ನನ್ನನ್ನು ಅಂತಿಮ ಮುಕ್ತಿಗೆ ಮುನ್ನಡೆಸುತ್ತದೆ ಎಂದು ನಂಬುವುದು, ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಹಬ್ಬಗಳನ್ನು ಆಚರಿಸುವುದು ಮತ್ತು ಧಾರ್ಮಿಕ ವಿಧಿಗಳು, ನಿತ್ಯಾಚರಣೆಗಳು ಮತ್ತು ಉಪವಾಸ ವ್ರತಗಳನ್ನು ಕೈಗೊಳ್ಳುವುದು ನಮ್ಮನ್ನು ಮುಕ್ತಿಗೆ ಮುನ್ನಡೆಸುತ್ತವೆ ಎಂದು ನಂಬುವುದು ಬಹಳ ತಪ್ಪುದಾರಿಗೆಳೆಯುತ್ತದೆ. ನಾವು ನಂಬುವ ತತ್ವಸಿದ್ಧಾಂತ ನಮ್ಮನ್ನು ಮುಕ್ತಿಗೆ ಮುನ್ನಡೆಸುತ್ತದೆ ಎಂದು ಆಲೋಚಿಸುವುದೂ ಸಹ ತಪ್ಪುದಾರಿಗೆಳೆಯುತ್ತದೆ. ಅಂತಹ ತತ್ವಶಾಸ್ತ್ರ ದರ್ಶನಗಳು ಧರ್ಮಗಳಾಗಿವೆ ಮತ್ತು ಅವಕ್ಕೂ ಧಮ್ಮಕ್ಕೂ ಯಾವುದೇ ರೀತಿಯ ಸಾಮ್ಯತೆಯಿಲ್ಲ.

ಆಗ ಯಾರೋ ಒಬ್ಬರು ಬುದ್ಧಿವಂತರು ಆಗಮಿಸುತ್ತಾರೆ ಮತ್ತು ಪ್ರೀತಿ ಮತ್ತು ಸಹಾನುಭೂತಿಯಿಂದ ನಿಜವಾದ ಧಮ್ಮವನ್ನು ನಿರೂಪಿಸುತ್ತಾರೆ. ನಿಶ್ಚಯವಾಗಿ ನೀವು ನಿಮ್ಮ ನಿತ್ಯಾಚರಣೆಗಳನ್ನು, ನಿಮ್ಮ ಹಬ್ಬಗಳನ್ನು ಮತ್ತು ಉಪವಾಸ ವ್ರತಗಳನ್ನು ಅನುಭವಿಸಿ. ಸಾಮಾಜಿಕ ಪದ್ಧತಿಗಳನ್ನು ಮತ್ತು ರೂಢಿಗಳನ್ನು ಅನುಸರಿಸುವುದರ ಬಗ್ಗೆ ತಕರಾರಿಲ್ಲ. ಆದರೆ ಅವುಗಳನ್ನೇ ನೀವು ಧಮ್ಮ ಎಂದು ತಪ್ಪಾಗಿ ಗ್ರಹಿಸಬಾರದು ಎಂದು ವಿವರಿಸುತ್ತಾರೆ. ಧಮ್ಮ ಇರುವುದೇ ಶಿಸ್ತುಬದ್ಧವಾದ ಮತ್ತು ಶುದ್ಧವಾದ ಮನಸ್ಸನ್ನು ಬೆಳೆಸಿಕೊಂಡು ಒಳ್ಳೆಯ ಬದುಕನ್ನು ಬದುಕಲು.

ಅನೇಕ ವೇಳೆ ಏನಾಗುತ್ತದೆ ಎಂದರೆ, ಸ್ಪರ್ಧಾತ್ಮಕ ಮನೋಭಾವ ಬೆಳೆಯುತ್ತದೆ. "ಇದು ನನ್ನ ನಂಬಿಕೆ; ನೀನೂ ಸಹ ಇದರಲ್ಲಿ ನಂಬಿಕೆಯಿಟ್ಟರೆ, ಆಗ ಮೋಡಗಳ ಮೇಲೆ ಕುಳಿತಿರುವ ಒಬ್ಬನು ನಿನಗೆ ಸ್ವರ್ಗಕ್ಕೆ ನೇರ ಪ್ರವೇಶ ನೀಡುತ್ತಾನೆ," ಎಂದು ಒಬ್ಬ ವ್ಯಕ್ತಿಯು ಹೇಳಬಹುದು. "ಇಲ್ಲ, ಇಲ್ಲ ನೀನು ನನ್ನ ನಂಬಿಕೆಯನ್ನು ಅನುಸರಿಸಿದರೆ, ಆಗ ವಿಶೇಷ ಶಕ್ತಿಗಳಿರುವ ನನ್ನ ದೇವರು ನಿನಗೆ ಬಹಳ ಬೇಗ ಸ್ವರ್ಗಕ್ಕೆ ಪ್ರವೇಶ ಕೊಡುತ್ತಾನೆ" ಎಂದು ಇನ್ನೊಬ್ಬರು ಹೇಳಬಹುದು. ನನ್ನ ದೇವರು, ನಿನ್ನ ದೇವರು– ಹೋರಾಟ ಮುಂದುವರಿಯುತ್ತದೆ. ನಾವು ಏನನ್ನು ಸೃಷ್ಟಿಸಿದ್ದೇವೆ! ಸುಮ್ಮನೆ ಯೋಚಿಸಿ. ನಿಜವಾಗಿಯೂ ದೇವರು ಇದ್ದರೆ, ಈ ದೇವರು ಎಲ್ಲರಿಗೂ ಸೇರಿದ್ದಲ್ಲವೆ? ದಯವಿಟ್ಟು ಅರ್ಥಮಾಡಿಕೊಳ್ಳಿ, ಬಹಳ ಕಾಲ ನಾವು ಕತ್ತಲೆಯಲ್ಲಿ ಬದುಕಿದ್ದೇವೆ. ತನಗಿಷ್ಟ ಬಂದಂತೆ ಚಿಂತಿಸಲು ಪ್ರತಿಯೊಬ್ಬರೂ ಸ್ವತಂತ್ರರು. ಆದರೆ ಧಮ್ಮವನ್ನು ನಾವು ಅದರ ನಿಜವಾದ ರೂಪದಲ್ಲಿ ನೋಡುವ ಅವಶ್ಯಕತೆಯಿದೆ ಮತ್ತು ಇನ್ನೂ ಹೆಚ್ಚಿನದೆಂದರೆ ನಾವು ಅದನ್ನು ಬದುಕಬೇಕು.

## ಧಮ್ಮದ ಪುನರುಜ್ಜೀವನ

ನಮ್ಮ ದೇಶದಲ್ಲಿ ಧಮ್ಮವು ಪುನಃ ಪುನಃ ಹುಟ್ಟುತ್ತದೆ ಮತ್ತು ಪುನಃ ಪುನಃ ನಾಶವಾಗುತ್ತದೆ. ಅದು ಉದಯವಾದಾಗ, ಅದನ್ನು ಅನುಭವಿಸುವ ಶಕ್ತಿ ನಮ್ಮೊಳಗೆ ಜಾಗೃತವಾಗುತ್ತದೆ. ನಿಜವಾದ ಜ್ಞಾನ ಮತ್ತು ಅನುಭವ ಜ್ಞಾನವನ್ನು ಪಡೆಯುವ ವ್ಯಕ್ತಿಗೆ ಅದು ***ಚಕ್ಖುಂ ಉದಪಾದಿ*** – ವ್ಯಕ್ತಿಯ ಆಂತರಿಕ ಕಣ್ಣುಗಳು ತೆರೆದಿವೆ. ಆದರೆ ಕೆಲವು ಜನರು ಈ ಪದಗಳಿಂದ ಗೊಂದಲಕ್ಕೀಡಾಗುತ್ತಾರೆ. ಕಣ್ಣುಗಳು ತೆರೆದಿವೆ ಎಂದು ಯಾರಾದರೊಬ್ಬರು ಹೇಳಿದಾಗ, ಭೌತಿಕ ಕಣ್ಣುಗಳ ಜಾಗದಲ್ಲಿ ವಿಶೇಷ ರೀತಿಯ ಕಣ್ಣುಗಳು ತೆರೆಯುತ್ತವೆ, ಅವು ಅವರಿಗೆ ಪ್ರತಿಯೊಂದನ್ನೂ ನೋಡುವ ಶಕ್ತಿ ನೀಡುತ್ತವೆ ಎಂದು ಯಾರಾದರೂ ನಿರೀಕ್ಷಿಸಬಹುದು. ಇನ್ನೊಂದು ಕಡೆಯಲ್ಲಿ, ನಮ್ಮ ಕಣ್ಣುಗಳು ತೆರೆದೇ ಇಲ್ಲ ಮತ್ತು ನಾವು ಮುಕ್ತಿಹೊಂದಲು ಸಾಧ್ಯವಿಲ್ಲ ಎಂದು ಇತರರು ಯೋಚಿಸಬಹುದು. ಅವರು ದುಃಖಕ್ಕೀಡಾಗುತ್ತಾರೆ.

ಒಳಗಿನ ಕಣ್ಣುಗಳು ಯಾವುವು? ನಮ್ಮೊಳಗಿನ ಸೂಕ್ಷ್ಮ ಸತ್ಯವನ್ನು ಅನುಭವಿಸುವ ಸಾಮರ್ಥ್ಯವು ಜಾಗೃತವಾದಾಗ, ಅದನ್ನು ಒಳಗಣ್ಣಿನಿಂದ ನೋಡುವುದು ಎಂದು ಕರೆಯಲಾಗುವುದು. ನೋಡುವುದಕ್ಕೆ ಎರಡು ವಿಧಗಳಿವೆ. ಮಾಮೂಲಿ ಪ್ರಾಪಂಚಿಕ ವಿಧಾನದಲ್ಲಿ ಕಣ್ಣುಗಳಿಂದ ನೋಡುವುದು– ಹೊರಗಿನ ಬಣ್ಣಗಳನ್ನು, ಜಾಗಗಳನ್ನು, ಬೆಳಕುಗಳನ್ನು, ಆಕೃತಿಗಳನ್ನು ನೋಡುವುದು. ಆಧ್ಯಾತ್ಮಿಕ ಕ್ಷೇತ್ರದಲ್ಲಿ "ನೋಡುವುದು" ಎಂದರೆ ಅಕ್ಷರಷಃ ನಮ್ಮ ಕಣ್ಣುಗಳಿಂದ ನೋಡುವುದು ಅಲ್ಲ, ಅನುಭವಿಸುವುದು, ಪ್ರತ್ಯಕ್ಷ ಅನುಭವಿಸುವುದು, ತಿಳಿಯುವುದು.

ಭಾರತದ ಪುರಾತನ ಭಾಷೆಯಲ್ಲಿ, ಪ್ರತ್ಯಕ್ಷ ಅನುಭವಿಸುವುದು ಎಂದರೆ ನೋಡುವುದು, ಅನುಭವಿಸುವುದು. ಆದರೆ ಈಗ ಈ ಅನುಭವಜ್ಞಾನದ ಶಬ್ದಗಳ ಬರೀ ಪ್ರತಿಧ್ವನಿ ಮಾತ್ರ ಉಳಿದಿದೆ. ಉದಾಹರಣೆಗೆ, "ಓ, ಈ ಸಂಗೀತವನ್ನು ಕೇಳು, ನೋಡು ಎಷ್ಟು ಮಧುರವಾಗಿದೆ!" ಎಂದು ನಾವು ಹೇಳುತ್ತೇವೆ. 'ನೋಡು', ಅಂದರೆ ಅದನ್ನು ಗ್ರಹಿಸು ಎಂದರ್ಥ. "ಈ ಸ್ಯಾಟಿನ್ ಬಟ್ಟೆಯನ್ನು ಮುಟ್ಟು, ನೋಡು ಅದು ಎಷ್ಟು ಮೃದುವಾಗಿದೆ" ಅಥವಾ "ನೋಡು ಈ ತಿನಿಸು ಎಷ್ಟೊಂದು ಸಿಹಿಯಾಗಿದೆ" ಇನ್ನೂ ಮುಂತಾಗಿ. 'ನೋಡು' ಅಂದರೆ ಪ್ರತ್ಯಕ್ಷ ಅನುಭವಿಸು ಎಂದರ್ಥ. ನೀವು ಕೇಳುವ ಮಾತುಗಳು, ನೀವು ನೋಡುವ ದೃಶ್ಯಗಳು, ನೀವು ಆಘ್ರಾಣಿಸುವ(ಮೂಸುವ) ಸುವಾಸನೆಗಳು, ನೀವು ಸವಿಯುವ ರುಚಿಗಳು, ನೀವು ಗ್ರಹಿಸುವ ಸ್ಪರ್ಶಗಳು, ಮನಸ್ಸಿನಲ್ಲಿ ಬರುವ ಆಲೋಚನೆಗಳು; ಅವುಗಳನ್ನು ನೋಡುವುದು ಅಂದರೆ, ಅವುಗಳನ್ನು ಪ್ರತ್ಯಕ್ಷ ಅನುಭವಿಸುವುದು. ಮಿಗಿಲಾಗಿ, ಪ್ರತ್ಯಕ್ಷ ಅನುಭವವನ್ನು ದೇಹದ ಚೌಕಟ್ಟಿನಲ್ಲಿ ಮಾತ್ರ ಪಡೆಯಲು ಸಾಧ್ಯ. ಈ ಕ್ಷೇತ್ರದ ಹೊರಗೆ ಏನೇ ನಡೆದರೂ, ಅದು ನಮಗೆ ವಾಸ್ತವವಾಗುವುದು ಯಾವುದಾದರೂ ಇಂದ್ರಿಯವನ್ನು ಸ್ಪರ್ಶಿಸಿದಾಗ ಮಾತ್ರ, ಬೇರೆ ರೀತಿಯಾಗಿ ಅಲ್ಲ.

ಆದ್ದರಿಂದ ಪ್ರತ್ಯಕ್ಷ ಅನುಭವದ ವಿವೇಕವನ್ನು, ಜ್ಞಾನವನ್ನು ***ಪನ್ಯ*** ಎಂದು ಕರೆಯಲಾಯಿತು. ***ಪನ್ಯ ಉದಪಾದಿ*** – ವಿವೇಕದ ಉದಯ, ತನ್ನದೇ ಸ್ವಂತ ಅನುಭವ ಜ್ಞಾನ, ಬೇರೆಯವರದಲ್ಲ. ಬೇರೆಯವರ ಜ್ಞಾನ, ಹೆಚ್ಚೆಂದರೆ, ಮುಕ್ತಿಯ ಪಥದಲ್ಲಿ ನಮಗೆ ಮಾರ್ಗದರ್ಶನ ನೀಡುತ್ತದೆ. ಒಂದು ಸಾರಿ ನಾವು ಮಾರ್ಗದಲ್ಲಿ ನಡೆಯುವ ತೀರ್ಮಾನ ಮಾಡಿ ನಮ್ಮನ್ನು ನಾವು

ಮಲಿನತೆಗಳಿಂದ, ದುಃಖದಿಂದ ಮತ್ತು ಬಂಧನದಿಂದ ಮುಕ್ತಗೊಳಿಸಿಕೊಂಡರೆ ನಾವೂ ಸಹ ಮುಕ್ತರಾಗುತ್ತೇವೆ. ಪ್ರತ್ಯಕ್ಷ ಅನುಭವದಿಂದ ನಮ್ಮದಾಗುವ ಜ್ಞಾನ ಮಾತ್ರ ನಮ್ಮನ್ನು ಮುಕ್ತಗೊಳಿಸಲು ಸಾಧ್ಯ.

ಈ ಜ್ಞಾನದಲ್ಲಿ ನಾವು ಸ್ಥಾಪಿತಗೊಂಡಾಗ, ಶಬ್ದಗಳು ನಮ್ಮ ಕಿವಿಯ ಸಂಪರ್ಕ ಮಾಡಿದಾಗ ಒಂದು ತರಂಗ ಉದಯವಾಗಿರುವುದನ್ನು ನಾವು ಅರಿಯುತ್ತೇವೆ. ತರಂಗ ಮತ್ತೊಂದು ತರಂಗಕ್ಕೆ ತಗುಲಿ ಮತ್ತೊಂದು ಹೊಸ ತರಂಗ ಉತ್ಪತ್ತಿಯಾಗುತ್ತದೆ, "ಓ, ಇದು ಅಶಾಶ್ವತ, ಅನಿಚ್ಚ, ಅನಿಚ್ಚ!" ನಾವು ಇದನ್ನು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಪ್ರತಿಕ್ರಿಯೆ ಮಾಡುವುದಿಲ್ಲ. ಒಂದು ತರಂಗ, ಮೂಗು ಇಂದ್ರಿಯ ದ್ವಾರದಲ್ಲಿ ಬರುತ್ತದೆಯೋ, ನಾಲಗೆ ಇಂದ್ರಿಯ ದ್ವಾರದಲ್ಲಿ ಬರುತ್ತದೆಯೋ, ದೇಹ ಇಂದ್ರಿಯ ದ್ವಾರದಲ್ಲಿ ಬರುತ್ತದೆಯೋ ಅಥವಾ ಮನಸ್ಸು ಇಂದ್ರಿಯ ದ್ವಾರದಲ್ಲಿ ಆಲೋಚನೆಯಾಗಿ ಬರುತ್ತದೆಯೋ ಅದನ್ನು ನಾವು ಒಂದು ಕಿರುತರೆಯಾಗಿ ಪ್ರತ್ಯಕ್ಷ ಅನುಭವಿಸುತ್ತೇವೆ ಮತ್ತು ಅದು ಅಶಾಶ್ವತ ಎಂದು ತಿಳಿಯುತ್ತೇವೆ. ನಾವು ಅರಿವಿನಿಂದ *ಪನ್ನ*ದಲ್ಲಿರುತ್ತೇವೆ.

ಈ ಹಿಂದೆ ಒಂದು ಕಾಲದಲ್ಲಿ ನಾನು ಈ ರೀತಿ ಪಠಿಸುತ್ತಿದ್ದೆ – ***ಇಂದ್ರಿಯಾನೀ ಇಂದ್ರಿಯಾರ್ಥೇಭಯ ತಸ್ಯ ಪ್ರಜ್ಞಾ ಪ್ರತಿಷ್ಠತಾ*** – ಅಂದರೆ, ಜ್ಞಾನೇಂದ್ರಿಯಗಳು ಜ್ಞಾನೇಂದ್ರಿಯಗಳ ಕೆಲಸ ಮಾಡುವುದಕ್ಕೆ ಇವೆ ಎಂದು ಯಾರು ತಿಳಿಯುತ್ತಾರೋ ಅವರು *ಪನ್ನ*ದಲ್ಲಿ ಸ್ಥಾಪಿತವಾಗುತ್ತಾರೆ. ಹೇಗೆ? ಇಂದ್ರಿಯಗಳು ಅರಿಯುವ ಕೆಲಸ ಮಾಡುತ್ತವೆ ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಕಣ್ಣುಗಳು ಕೇವಲ ನೋಡುತ್ತವೆ, ಮೂಗು ಕೇವಲ ವಾಸನೆ ಹಿಡಿಯುತ್ತದೆ, ಚರ್ಮ ಸ್ಪರ್ಶವನ್ನು ಮಾತ್ರ ಅರಿಯುತ್ತದೆ ಮತ್ತು ಮನಸ್ಸು ಕೇವಲ ಆಲೋಚಿಸುತ್ತದೆ. ಪ್ರತಿಯೊಬ್ಬರಿಗೂ ಇದು ಗೊತ್ತಿದೆ. ಹಾಗಾದರೆ, ಪ್ರತಿಯೊಬ್ಬರೂ *ಪನ್ನ*ದಲ್ಲಿ ಸ್ಥಾಪಿತರಾಗಿದ್ದಾರೆಯೇ?

ಪುರಾತನ ಕಾಲದಲ್ಲಿ ಅರ್ಥಮಾಡಿಕೊಂಡಿದ್ದಂತೆ ನಾನು ಇಲ್ಲಿ *ಪನ್ನ*ದ ಬಗ್ಗೆ ಮಾತಾಡಿದ್ದೇನೆ. ಮನಸ್ಸು ನಾಲ್ಕು ಭಾಗಗಳಿಂದ ಕೂಡಿದೆ. ಮೊದಲನೆಯ ಭಾಗ ಕೇವಲ ತಿಳಿಯುವ ಕೆಲಸ ಮಾಡುತ್ತದೆ. ಇಂದ್ರಿಯದ ವಸ್ತು ಒಂದು ಇಂದ್ರಿಯವನ್ನು ಸ್ಪರ್ಶಿಸಿದ ತಕ್ಷಣ, ಮನಸ್ಸಿನ ಮೊದಲನೆಯ ಭಾಗ ತಲೆಯೆತ್ತುತ್ತದೆ ಮತ್ತು ಏನೋ ಘಟಿಸಿತು ಎಂದು ತಿಳಿಯುತ್ತದೆ. ನಂತರ, ಎರಡನೆಯ ಭಾಗ ತಲೆಯೆತ್ತುತ್ತದೆ ಮತ್ತು ಏನಾಯಿತು ಎಂಬುದನ್ನು ಗುರುತಿಸುತ್ತದೆ. ಅದರ ಪರಿಣಾಮವಾಗಿ ಬರುವ ಸಂವೇದನೆಯನ್ನು ಮನಸ್ಸಿನ ಮೂರನೆಯ ಭಾಗ ಅರಿಯುತ್ತದೆ(ಅನುಭವಿಸುತ್ತದೆ). ನಂತರ ನಾಲ್ಕನೆಯ ಭಾಗ ಪ್ರತಿಕ್ರಿಯಿಸುತ್ತದೆ ಮತ್ತು ಗಂಟುಗಳನ್ನು ಕಟ್ಟುತ್ತದೆ. ***ಇಂದ್ರಿಯಾನಿ ಇಂದ್ರಿಯಾರ್ಥೇಭ್ಯಹ*** – ಇಂದ್ರಯಗಳು ಇಂದ್ರಿಯಗಳ ಕೆಲಸ ಮಾಡಲಿ. ಕಿವಿಗಳು ಶಬ್ದವನ್ನು ಕೇಳಲಿ, ಕಣ್ಣುಗಳು ಒಂದು ನೋಟವನ್ನು ನೋಡಲಿ, ಅದಷ್ಟೇ; ಮುಂದಿನ ಮೂರು ಹಂತಗಳಿಗೆ ನಾವು ಅದನ್ನು ತೆಗೆದುಕೊಂಡು ಹೋಗುವುದಿಲ್ಲ. ಅದು ಸುಲಭವಲ್ಲದಿದ್ದರೂ ನಾವು ಆ ಹಂತವನ್ನು ತಲುಪಬೇಕು. ಅದಕ್ಕೆ ಗಂಭೀರವಾದ ಮತ್ತು ದೀರ್ಘವಾದ ಕೆಲಸದ ಅವಶ್ಯಕತೆಯಿದೆ. ಈಗಿನ ಪರಿಸ್ಥಿತಿಯಲ್ಲಿ, ಇಂದ್ರಿಯದ ವಸ್ತು ಯಾವಾಗ ತನ್ನ ಇಂದ್ರಿಯವನ್ನು ಸ್ಪರ್ಶಿಸುತ್ತದೆಯೋ, ಆ ಕೂಡಲೇ ಮನಸ್ಸಿನ ನಾಲ್ಕನೆಯ ಭಾಗ ತನ್ನ ತಲೆಯೆತ್ತುತ್ತದೆ ಮತ್ತು ರಾಗ ಮತ್ತು ದ್ವೇಷಗಳನ್ನು ಉತ್ಪತ್ತಿ ಮಾಡುತ್ತಾ ಪ್ರತಿಕ್ರಿಯಿಸುತ್ತದೆ, ಗಂಟುಗಳನ್ನು ಕಟ್ಟುತ್ತದೆ,– ***ಗುಣಾನ್ವಿತನ್, ಗುಣಾನ್ವಿತನ್,–*** ಮನಸ್ಸಿನ ಮಲಿನತೆಗಳನ್ನು ದ್ವಿಗುಣಗೊಳಿಸುವುದು.

ಅನುಭವದ ಮಟ್ಟದಲ್ಲಿ ಮೊದಲು ಸತ್ಯವನ್ನು ತಿಳಿಯದೆ ಇದನ್ನು ನಿಜವಾಗಿ ಅರ್ಥಮಾಡಿಕೊಳ್ಳಲು ವ್ಯಕ್ತಿಗೆ ಹೇಗೆ ಸಾಧ್ಯವಾಗುತ್ತದೆ? ಯಾರ ವಿವೇಕ(ಅನುಭವ ಜ್ಞಾನ) ಜಾಗೃತವಾಗಿದೆಯೋ ಅವರು ಹೇಳುತ್ತಾರೆ – ***ವಿಜ್ಜಾ ಉದಪಾದಿ*** – ಜ್ಞಾನದ ಉದಯವಾಗಿದೆ, ಮತ್ತು ಅಜ್ಞಾನ ದೂರವಾಗಿದೆ. ಅಶಾಶ್ವತವಾದುದನ್ನು ಶಾಶ್ವತವಾದದ್ದು ಮತ್ತು ದೋಷರಹಿತವಾದದ್ದು ಎಂದು ನಾವು ಪರಿಗಣಿಸಿದರೆ ಅಜ್ಞಾನದಲ್ಲಿ ಮುಂದುವರಿಯುತ್ತಿರುತ್ತೇವೆ. ಇಂದ್ರಿಯಗಳ ಕ್ಷೇತ್ರ ***ಅನಿಚ್ಚ,*** ಅಂದರೆ ಅಶಾಶ್ವತ. ವ್ಯಕ್ತಿಯು ಇದನ್ನು ಸರಿಯಾಗಿ ತಿಳಿದರೆ, ಆಗ ಇದು ***ಪನ್ನ,*** ಅನುಭವ ಜ್ಞಾನ.

ಹಿಂದಿನ ಬುದ್ಧಿವಂತ ವ್ಯಕ್ತಿಗಳು ಹೇಳಿದ್ದಾರೆ, ***ಆಲೋಕೋ ಉದಪಾದಿ*** – ಬೆಳಕು ಉದಯವಾಗುತ್ತದೆ. ನಾವು ಎಣ್ಣೆಯ ದೀಪಗಳನ್ನು ಹಚ್ಚುತ್ತೇವೆ. ಅದು ಒಳ್ಳೆಯದು. ಕೊನೆಯ ಪಕ್ಷ ಹೊರಗಿನ ಕತ್ತಲೆ ದೂರವಾಗುತ್ತದೆ. ಆದಾಗ್ಯೂ, ವಾಸ್ತವವಾಗಿ ನಾವು ನಮ್ಮೊಳಗೇ ಇರುವ ಕತ್ತಲೆಯನ್ನು ಓಡಿಸಬೇಕು. ನಮ್ಮೊಳಗಿನ ಬೆಳಕು ಪ್ರಕಾಶಿಸಿದಾಗ ಮಾತ್ರ ನಾವು ಏನು ಮಾಡುತ್ತಿದ್ದೇವೆಯೋ, ಅದು ಕೇವಲ ಗಂಟು ಕಟ್ಟುವುದು ಮತ್ತು ತಳಮಳವನ್ನು ಬೆಳೆಸಿಕೊಳ್ಳುವುದು ಎಂಬುದನ್ನು ನಾವು ಮನಗಾಣಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಅಲ್ಲಿ ಕೇವಲ ಅಜ್ಞಾನವಿರುತ್ತದೆ. ನಮಗೆ ನಾವೇ ಹಾನಿಮಾಡಿಕೊಳ್ಳುತ್ತೇವೆ ಎಂಬ ಅರಿವು ನಮಗಿರುವುದಿಲ್ಲ ಮತ್ತು ಹೌದು, ನಾವು ಇತರರಿಗೂ ಸಹ ಹಾನಿ ಮಾಡಬಹುದು.

ಯಾವಾಗ ವ್ಯಕ್ತಿಯು ಕಳ್ಳತನ, ಕೊಲೆ, ಲೈಂಗಿಕ ದುರಾಚಾರ, ಮೋಸ ಅಥವಾ ಸುಳ್ಳಿನಂತಹ ಅನಾರೋಗ್ಯಕರವಾದ ಕ್ರಿಯೆಗಳಲ್ಲಿ ತೊಡಗುತ್ತಾನೋ, ಅವನು ತನ್ನಲ್ಲಿಯೇ ಕೋಪ, ದ್ವೇಷ ಅಥವಾ ದುರಾಸೆಯಂತಹ ನಕಾರಾತ್ಮಕತೆಯನ್ನು ಉತ್ಪತ್ತಿ ಮಾಡಿಕೊಳ್ಳುತ್ತಾನೆ. ಯಾವುದೇ ಮಲಿನತೆ ಮೊದಲು ತನ್ನಲ್ಲಿಯೇ ಉದಯವಾಗುತ್ತದೆ. ನಂತರ ಅದು ವಾಚಿಕ ಅಥವಾ ದೈಹಿಕ ಕ್ರಿಯೆಯಾಗಿ ಪ್ರಕಟವಾಗುತ್ತದೆ. ಯಾವುದೇ ಮಲಿನತೆ ಉದಯವಾದ ಕೂಡಲೇ ಶಿಕ್ಷೆಯು ತಕ್ಷಣ ಅನುಸರಿಸುತ್ತದೆ. ಇದು ಪ್ರಕೃತಿಯ ನಿಯಮ. ಏಕೆಂದರೆ ಅವು ಜೊತೆಗೇ ಬರುತ್ತವೆ. ಅವುಗಳನ್ನು ಸಹಜಾತ ಎಂದು ಕರೆಯಲಾಗುವುದು. ಯಾವಾಗ ಮಲಿನತೆ ಬರುತ್ತದೆಯೋ, ದುಃಖ ಮತ್ತು ತಳಮಳ ಕಾಣಿಸಿಕೊಳ್ಳುತ್ತವೆ ಮತ್ತು ಶಾಂತಿ ನಾಶವಾಗುತ್ತದೆ.

ನಿಮಗೆ ನೀವೇ ಹಾನಿಮಾಡಿಕೊಳ್ಳಬಯಸುವುದಿಲ್ಲ ಎಂದು ಒಂದು ಸಾರಿ ತೀರ್ಮಾನ ಮಾಡಿದ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು? ಬೆಂಕಿಯಲ್ಲಿ ಕೈಯಿಟ್ಟರೆ ಸುಡುತ್ತದೆ ಎಂಬ ವಿವೇಕ ನಮ್ಮೆಲ್ಲರಿಗೂ ಇದೆ. ನಾವು ಬೆಂಕಿಯಲ್ಲಿ ಕೈಯಿಡುವುದಿಲ್ಲ. ಒಂದು ಸಾರಿ ಅಥವಾ ಎರಡು ಸಾರಿ ಸುಟ್ಟುಕೊಂಡಿರಬಹುದು; ಆದರೆ ಬೆಂಕಿಯಿಂದ ದೂರವಿರಬೇಕು ಎಂಬ ವಿವೇಕ ತಕ್ಷಣ ಬರುತ್ತದೆ. ಆದರೆ ನಮ್ಮೊಳಗೇ ಇರುವ ನಕಾರಾತ್ಮಕತೆಗಳ ಬೆಂಕಿಯಿಂದ ನಾವು ದೂರ ಇರುವುದು ಹೇಗೆ?

ದೇಹದ ಚೌಕಟ್ಟಿನೊಳಗೆ ನಡೆಯುವುದನ್ನೆಲ್ಲಾ ಅನುಭವದ ಮಟ್ಟದಲ್ಲಿ ಅರಿಯುವುದರಿಂದ ನಕಾರಾತ್ಮಕತೆಗಳ ಬೆಂಕಿಯಿಂದ ದೂರವಿರಬಹುದು. ಬೆಂಕಿ ಸುಡುತ್ತದೆ ಎಂಬುದು ನಮಗೆ ಗೊತ್ತಿರುವಂತೆಯೇ, ಮನಸ್ಸಿನಲ್ಲಿ ಮಲಿನತೆಗಳು ಬಂದ ಕೂಡಲೇ ತಳಮಳ ಮತ್ತು ಶಿಕ್ಷೆಯು ಅನುಸರಿಸುತ್ತವೆ ಎಂಬ ಜ್ಞಾನವನ್ನೂ ಸಹ ನಾವು ಬೆಳೆಸಿಕೊಳ್ಳಬೇಕು. ಇದನ್ನು ತಿಳಿಯುವುದೇ ಧಮ್ಮವನ್ನು ತಿಳಿದಂತೆ. ಈ ಜ್ಞಾನದಿಂದ ಒಬ್ಬ ವ್ಯಕ್ತಿಯು ***ಕಾಯಸ್ಥ***ನಾಗುತ್ತಾನೆ, ಅಂದರೆ, ಕಾಯದಲ್ಲಿ, ದೇಹದಲ್ಲಿ ಅರಿವಿನಿಂದ ವಿಹರಿಸುವವನು. ಬೂದಿಯ ಮೇಲ್ಪದರದ ಕೆಳಗೆ ಬೆಂಕಿಯು ಪ್ರಕಾಶಮಾನವಾಗಿ ಉರಿಯುವುದನ್ನು ಅಜ್ಞಾನವಿರುವುದರಿಂದ ವ್ಯಕ್ತಿಯು ಅರಿಯುವುದಿಲ್ಲ. ಅದೇ ತರಹ, ಮೇಲ್ಮಟ್ಟದ ಮನಸ್ಸು, ಅದರ ಕೆಳಗೆ ಉಪಜಾಗೃತ ಮಟ್ಟದಲ್ಲಿರುವ ಕುದಿಯುವ ತಳಮಳವನ್ನು ಅರಿಯದೆ, ನಾನು ಸಂತೋಷವಾಗಿದ್ದೇನೆ ಎಂದು ಯೋಚಿಸುತ್ತದೆ. ಹಾಗಿಲ್ಲದೆ ಹೋದರೆ, ಸರಿಯಾದ ಮನಸ್ಸಿನ ಯಾರು ತಾನೆ ತನ್ನನ್ನು ತಾನು ದುಃಖಕ್ಕೀಡು ಮಾಡಿಕೊಂಡು ನಾನು ಸಂತೋಷವಾಗಿದ್ದೇನೆ ಎಂದು ಯೋಚಿಸುತ್ತಾರೆ? ಯಾರೂ ಇಲ್ಲ.

ಯಾವಾಗ ಈ ಅರಿವು ಬರುತ್ತದೆಯೋ ಆಗ – ***ಆಲೋಕೋ ಉದಪಾದಿ*** – ಬೆಳಕು ಬರುತ್ತದೆ. ಪುರಾತನ ಭಾರತದ ಅರ್ಥಗಳನ್ನು ಈ ಶಬ್ದಗಳು ಕಳೆದುಕೊಂಡಿವೆ. ಈಗ ನಿಮ್ಮೊಳಗೆ ಗಮನಿಸುವುದರಿಂದ ಈ ಶಬ್ದಗಳು ಬಹುಷಃ ಮತ್ತೊಮ್ಮೆ ಜನ್ಮ ಪಡೆಯುತ್ತವೆ. ಯಾವುದು ಅಜ್ಞಾನ ಮತ್ತು ಯಾವುದು ಜ್ಞಾನ, ಯಾವುದು ಅನುಭವ ಜ್ಞಾನ (ವಿವೇಕ)? ಕತ್ತಲೆ ಅಂದರೆ ಏನು ಮತ್ತು ನಿಜವಾಗಿಯೂ ಬೆಳಕು ಅಂದರೆ ಏನು?

ನಿಮ್ಮ ಪ್ರತ್ಯಕ್ಷ ಅನುಭವದಿಂದ ಇದನ್ನು ತಿಳಿಯಿರಿ; ನಿಮ್ಮ ಗುರುಗಳು ಅಥವಾ ನಿಮ್ಮ ಸಂಪ್ರದಾಯಗಳು ಮತ್ತು ಧರ್ಮಗ್ರಂಥಗಳು ಹೇಳುತ್ತವೆ ಎಂಬ ಕಾರಣಕ್ಕೆ ಒಪ್ಪಿಕೊಳ್ಳಬೇಡಿ. ನೀವು ನಿಮ್ಮ ಸ್ವಂತ ಅನುಭವದಿಂದ ಮಾತಾಡುತ್ತಿದ್ದೀರಿ ಎಂದು ಹೇಳಲು ಶಕ್ತವಾದ ದಿನವೇ ನಿಮ್ಮೊಳಗೆ ಬೆಳಕು ಬರಲು ಪ್ರಾರಂಭವಾದ ದಿನವಾಗುತ್ತದೆ. ನಿಸ್ಸಂದೇಹವಾಗಿ, ಅದನ್ನು ನಿಜವಾದ ಅಭ್ಯಾಸದಿಂದ, ಸಾಧನೆಯಿಂದ ಬೆಳೆಸಿಕೊಳ್ಳಬೇಕು. ಕೇವಲ ಯಾಂತ್ರಿಕವಾಗಿ ದೇಹದಲ್ಲಿ ಸುತ್ತುವುದು ಸಾಕಾಗುವುದಿಲ್ಲ. ನೀವು ಎಷ್ಟು ಸುತ್ತು ಹಾಕಿದ್ದೀರಿ ಎಂದು ಲೆಕ್ಕವಿಡಲು ಮೋಡದ ಮೇಲೆ ಯಾರೂ ಕುಳಿತಿಲ್ಲ. ಸಾಯುವ ಹೊತ್ತಿಗೆ ಇಷ್ಟೊಂದು ಸುತ್ತು ಹಾಕಿದ್ದಾರೆ, ಆಗ ಈ ಬಾಗಿಲು ತೆರೆಯುತ್ತದೆ, ಇಷ್ಟು ಸುತ್ತು ಹಾಕಿದ್ದರೆ ಆ ಬಾಗಿಲು ತೆರೆಯುತ್ತದೆ. ಇಲ್ಲ, ಯಾರೂ ಅಂತಹ ಲೆಕ್ಕ ಇಟ್ಟಿರುವುದಿಲ್ಲ.

ಅಲ್ಲದೆ, ಮೇಲಿನ ದೇವರುಗಳು ನಮ್ಮೊಳಗೆ ನಕಾರಾತ್ಮಕತೆಗಳನ್ನು ಉತ್ಪತ್ತಿ ಮಾಡುವುದಿಲ್ಲ ಎಂಬುದನ್ನೂ ಅರ್ಥಮಾಡಿಕೊಳ್ಳಿ; ನಮ್ಮೊಳಗೆ ನಾವೇ ಮಲಿನತೆಗಳನ್ನು ಉತ್ಪತ್ತಿ ಮಾಡಿಕೊಂಡು ನಮ್ಮನ್ನು ದುಃಖಕ್ಕೀಡು ಮಾಡಿಕೊಳ್ಳುತ್ತೇವೆ. ಹೊರಗಿನ ಯಾರಿಗೂ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ. ವಾಸ್ತವವಾಗಿ ಯಾರಾದರೂ ಯಾಕೆ ಪ್ರತಿಯೊಬ್ಬರಲ್ಲಿ ನಕಾರಾತ್ಮಕತೆಗಳನ್ನು ಸೃಷ್ಟಿಸಿ, ಎಲ್ಲರನ್ನೂ ತಳಮಳಕ್ಕೀಡು ಮಾಡಿ, ನಂತರ "ನನ್ನನ್ನು ಪ್ರಾರ್ಥಿಸಿ, ನಾನು ನಿಮ್ಮನ್ನು ದುಃಖಸಾಗರದಾಚೆ ತೆಗೆದುಕೊಂಡು ಹೋಗುತ್ತೇನೆ" ಎಂದು ಹೇಳಬೇಕು? ಅದು ಯಾವ ರೀತಿಯ ಜೀವಿ ಆಗಿರಬಹುದು? ಇದು ನಮ್ಮ ಸ್ವಂತ ಕಲ್ಪನೆಯ ಸೃಷ್ಟಿಯಲ್ಲದೆ ಬೇರೇನೂ ಅಲ್ಲ.

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

***'ಅತ್ತಾ ಹಿ ಅತ್ತನೋ ನಾಥೋ, ಅತ್ತಾ ಹಿ ಅತ್ತನೋ ಗತಿ–*** ನೀನೇ ನಿನ್ನ ಧಣಿ, ನಿನ್ನ ಭವಿಷ್ಯವನ್ನು ನೀನೇ ರೂಪಿಸಿಕೊಳ್ಳುತ್ತೀಯ.

ಸ್ವಾವಲಂಬನೆ ನಿಜವಾದ ಧಮ್ಮದ ಒಂದು ಮಾನದಂಡ. ಸಂಘಟಿತ ಧರ್ಮವು ಒಬ್ಬ ವ್ಯಕ್ತಿಯನ್ನು ಇತರರ ಮೇಲೆ ಅವಲಂಬಿಸುವಂತೆ ಮಾಡುತ್ತದೆ. ಧಾರ್ಮಿಕ ಮುಖಂಡರೆಂದು ಕರೆಸಿಕೊಳ್ಳುವವರು ಜನರ ಭಯ ಮತ್ತು ನ್ಯೂನ್ಯತೆಗಳನ್ನು ಉಪಯೋಗಿಸಿಕೊಂಡೇ ಏಳಿಗೆಯಾಗುತ್ತಾರೆ. ನಮ್ಮ ವಿಶೇಷ ಶಕ್ತಿಗಳನ್ನು ಉಪಯೋಗಿಸಿಕೊಂಡು ನಿಮ್ಮನ್ನು ವಿಮುಕ್ತಿಗೊಳಿಸುತ್ತೇನೆ, ನನಗೆ ಶರಣಾಗಿ ಎಂದು ಜನರನ್ನು ಪ್ರೋತ್ಸಾಹಿಸುತ್ತಾರೆ. ಆಮೇಲೆ ನಿಸ್ಸಂದೇಹವಾಗಿ, ಈ ವಿಶೇಷ ಮುಕ್ತಿಗಾಗಿ ದೊಡ್ಡ ಮೊತ್ತದ ಶುಲ್ಕವಿರುತ್ತದೆ. ಇದು ಖಂಡಿತವಾಗಿಯೂ ನಿಜವಾದ ಧಮ್ಮವಲ್ಲ.

ಅದೇನೇ ಇದ್ದರೂ, ನಾವು ಇದಕ್ಕೆ ಬಲಿಯಾಗಬಾರದು. ನಾವು ಯಾವಾಗಲೂ ಎಚ್ಚರಿಕೆಯಿಂದಿರಬೇಕು ಮತ್ತು ಸ್ವಾವಲಂಬಿಗಳಾಗಲು ಕೆಲಸಮಾಡಬೇಕು. ನಮ್ಮ ಪ್ರತಿಯೊಂದು ಕ್ರಿಯೆಗೂ ನಾವು ಮಾತ್ರ ಜವಾಬ್ದಾರರು. ಒಳ್ಳೆಯ ಕ್ರಿಯೆಗಳು ಒಳ್ಳೆಯ ಫಲಗಳನ್ನು ನೀಡುತ್ತವೆ. ಇದನ್ನು ತಿಳಿದು ನಾವು ಒಳ್ಳೆಯ ಬೀಜಗಳನ್ನು ಬಿತ್ತಬೇಕು ಮತ್ತು ನಕಾರಾತ್ಮಕ ಕ್ರಿಯೆಗಳನ್ನು, ಕೆಟ್ಟ ಕಮ್ಮವನ್ನು ತ್ಯಜಿಸಬೇಕು. ಆಗ ಅವುಗಳ ಅಸುಖಕರ ಫಲಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು.

ಇದು ಧಮ್ಮದ ಸರಳವಾದ ಅಂಶ. ಆದರೆ, ದುರಾದೃಷ್ಟವಶಾತ್, ನಾವು ದುರ್ಬಲರು ಮತ್ತು ಅಸಹಾಯಕರು ಎಂದು ನಂಬುವುದನ್ನು ನಾವೇ ರೂಢಿಮಾಡಿಕೊಂಡುಬಿಟ್ಟಿದ್ದೇವೆ. ಯಾರೋ ಒಬ್ಬರು ನಮ್ಮನ್ನು ದುಃಖ ಸಾಗರದಾಚೆಗಿನ ಮುಕ್ತಿಯ ತೀರಕ್ಕೆ ಕೊಂಡೊಯ್ಯುತ್ತಾರೆ ಎಂಬ ನಿರಂತರವಾದ ನಂಬಿಕೆ.

"ನಾನೇ ನನ್ನ ಧಣಿ ಮತ್ತು ನಾನೇ ನನ್ನ ಭವಿಷ್ಯವನ್ನು ರೂಪಿಸಿಕೊಳ್ಳುವವನು. ನಾನು ಸಂತೋಷಕರವಾದ, ದುಃಖಕರವಾದ ಭವಿಷ್ಯ ಸೃಷ್ಟಿಸಿಕೊಳ್ಳುತ್ತೇನೋ ಅಥವಾ ಇದೆಲ್ಲದರಿಂದಾಚೆಗಿನ ಸಂಪೂರ್ಣ ಮುಕ್ತಿಯ ಭವಿಷ್ಯವನ್ನು ಸೃಷ್ಟಿಸಿಕೊಳ್ಳುತ್ತೇನೋ, ನಾನು ಮಾತ್ರ ಜವಾಬ್ದಾರ" ಎಂಬ ಅರಿವು ನಿಮ್ಮಲ್ಲಿ ಬರಲೇಬೇಕು.

ಧಮ್ಮವು ಉದಯವಾದಾಗ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ ಮತ್ತು ಸ್ವಾವಲಂಬಿಗಳಾಗುತ್ತಾರೆ. ಅವಶ್ಯಕವಾಗಿ, ಬೇರೆಯವರಿಂದ ಸಹಾಯ ಪಡೆಯಬಹುದು. ಆದರೆ, ದಾರಿಯಲ್ಲಿ ನಡೆಯುವುದು ಹೇಗೆ ಎಂಬುದನ್ನು ತೋರಿಸಲು, ದಾರಿಯಲ್ಲಿ ಮಾರ್ಗದರ್ಶನ ನೀಡುವಷ್ಟರ ಮಟ್ಟಿಗೆ ಮಾತ್ರ ಬೇರೆಯವರ ಸಹಾಯ ಪಡೆಯಬೇಕು. ಇದಾದ ನಂತರ, ಪ್ರತಿಯೊಂದು ಹೆಜ್ಜೆಯನ್ನು ತಾನೇ ಇಡಬೇಕು. ಈ ಅರಿವು ಬಂದರೆ, ಆಗ ಈ ಬೆಳಕಿನ ಹಬ್ಬ ನಿಜವಾಗಿಯೂ ನಮಗೆ ಹೊಸ ವರ್ಷವನ್ನು, ಹೊಸ ಜೀವನವನ್ನು, ಹೊಸ ಭವಿಷ್ಯವನ್ನು, ಅಪರಿಮಿತ ನೆಮ್ಮದಿಯಿಂದ ತುಂಬಿದ ಭವಿಷ್ಯವನ್ನು ತರುತ್ತದೆ.

ಅನುಭವ ಜ್ಞಾನದ ಬೆಳಕಿನಿಂದ ಅಜ್ಞಾನದ ಕತ್ತಲೆಯನ್ನು ಹೊಡೆದೋಡಿಸಿ; ಧಮ್ಮದ ನಿಜವಾದ ಸಾರವನ್ನು ಅರ್ಥಮಾಡಿಕೊಳ್ಳಿ ಮತ್ತು ಅಂತಿಮ ಗುರಿ ತಲುಪುವ ತನಕ ಹಂತ ಹಂತವಾಗಿ ಸಂಪೂರ್ಣ ಮುಕ್ತಿಯ ಮಾರ್ಗದಲ್ಲಿ ಮುನ್ನಡೆಯಿರಿ.

ಸಂತೋಷವಾಗಿರಿ, ಶಾಂತಿಯಿಂದಿರಿ.

ಕಲ್ಯಾಣಮಿತ್ರ ಸತ್ಯನಾರಾಯಣ ಗೋಯಂಕ

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು: 2017** ಜುಲೈ 12–23, 26–6 ಆಗಸ್ಟ್ 9–20, ಸೆಪ್ಟಂಬರ್ 7–18, ಅಕ್ಟೋಬರ್ 4–15, 18–29, ನವೆಂಬರ್ 15–26, 29–10 ಡಿಸೆಂಬರ್ 13–24.**ಮೂರು ದಿನದ ಶಿಬಿರ:** ಸೆಪ್ಟಂಬರ್ 21–24, 28–31 ಡಿಸೆಂಬರ್.**ಎರಡು ದಿನದ ಶಿಬಿರ:** ನವೆಂಬರ್ 10–12. **ಸತಿಪಠ್ಠಾನ ಶಿಬಿರಗಳು:** ಆಗಸ್ಟ್ 28–5 ಸೆಪ್ಟಂಬರ್, ನವೆಂಬರ್ 1–9. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ದೂ.: 080–23712377, ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org; website: www.dhamma.org.

## ಬೆಂಗಳೂರಿನಲ್ಲಿ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ

**ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593.

**ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447
ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm

## ಒಂದು ದಿನದ ಶಿಬಿರಗಳ ಮಾಹಿತಿ

**ಬೆಂಗಳೂರು:** ಪ್ರತಿ ಭಾನುವಾರ 10 ರಿಂದ 4 ಗಂಟೆ, ಧಮ್ಮ ಪಫುಲ್ಲ, ಆಲೂರು. **ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9481149553, 99801005309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506

**10ದಿನದ ಶಿಬಿರದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಹಾಯಕ್ಕಾಗಿ ಸಂಪರ್ಕಿಸಿ.** ಬಳ್ಳಾರಿ: ಎ.ಮಲ್ಲಿಕಾರ್ಜುನಪ್ಪ, ಮೊ.ಸಂ. 9449511217. ಬೆಳಗಾವಿ: ವೀರನಗೌಡ ವಿ.ಸಾರನಾಡಗೌಡ್ರ, ಮೊ.ಸಂ.9902657335. ದಾವಣಗೆರೆ: ಉದಯ ಶಿವಕುಮಾರ್, ಮೊ.ಸಂ. 9739314581(ಮೆಸೇಜ್ ಮಾಡಿ, ಅವರೇ ಕರೆ ಮಾಡುತ್ತಾರೆ.) ಜಿ.ಟಿ.ಗೋವಿಂದಪ್ಪ, ಮೊ.ಸಂ.9448588789.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ
ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.